ಕರ್ನಾಟಕ ಸರ್ಕಾರ

ಗ್ರಾಅಪ 22 ಜೈಅಯೋ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 08.03.2010.

ಇವರಿಂದ :

ಸರ್ಕಾರದ ಪ್ರಧಾನ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,

ಇವರಿಗೆ :

ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

ಮಾನ್ಯರೇ,

ವಿಷಯ 2009-10ನೇ ಸಾಲಿನ, 1ನೇ ನವೆಂಬರ್, 2009 ರಿಂದ ಜಾರಿಗೆ ಬರುವಂತೆ ಕೇಂದ್ರ ಸಹಾಯಧನ ಪರಿಷ್ಕರಣೆ

ಉಲ್ಲೇಖ
1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ ರವರ ಅರೆ ಸರ್ಕಾರಿ ಪತ್ರ ದಿನಾಂಕ 19.02.2010
2. ಯೋಇ 4ಜಿಯೋವಿ 2009 ದಿನಾಂಕ 28.10.20009

ಉಲ್ಲೇಖಿತ (1) ರ ಪತ್ರದಲ್ಲಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ ರವರು ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮದಡಿ, 2009-10ನೇ ಸಾಲಿನ, 1ನೇ ನವೆಂಬರ್ 2009 ರಿಂದ ಜಾರಿಗೆ ಬರುವಂತೆ ಕೇಂದ್ರ ಸಹಾಯಧನವನ್ನು ಪರಿಷ್ಕರಿಸಿ, ವರ್ಗಾವಾರು ಹೊರತು ಪಡಿಸಿ, ಹಾಗೂ ಹಾಲಿ ಇದ್ದಂತಹ ರಾಜ್ಯ ಸಹಾಯಧನವನ್ನು ಮುಂದುವರಿಸಿ ಆದೇಶಿಸಿರುವುದರಿಂದ ರಾಜ್ಯ ಸಹಾಯಧನದಲ್ಲಿ ವರ್ಗಾವಾರು ಸಹಾಯಧನದ ವಿವರಗಳನ್ನು ನೀಡಿ, ಯಾವ ದರದನ್ವಯ ಸಹಾಯಧನವನ್ನು ನೀಡಬೇಕೆಂದು ಸ್ಪಷ್ಟೀಕರಣ ನೀಡುವಂತೆ ಕೋರಲಾಗಿದೆ. ಇದನ್ನು ಪರಿಶೀಲಿಸಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ರಾಜ್ಯ ಸಹಾಯಧನವನ್ನು ನೀಡುವ ಕುರಿತು ಈ ಕೆಳಗಿನಂತೆ ಸ್ಪಷ್ಟೀಕರಣ ನೀಡಲಾಗಿದೆ.

- ಕೇಂದ್ರ ಸರ್ಕಾರವು ಕೇಂದ್ರ ಸಹಾಯಧನವನ್ನು ವರ್ಗವಾರು ಹೊರತುಪಡಿಸಿ,ಘಟಕವಾರು(ಗಾತ್ರವಾರು) ಸಹಾಯಧನವನ್ನು ಪರಿಷ್ಕರಿಸಿರುವುದರಿಂದ ರಾಜ್ಯ ಸಹಾಯಧನದಡಿ ಕೂಡ ವರ್ಗವಾರು ಹೊರತು ಪಡಿಸಲಾಗಿದೆ.
- ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ, ರಾಜ್ಯ ಸಹಾಯಧನವನ್ನು ಘಟಕವಾರು(ಗಾತ್ರವಾರು) ಈ ಕೆಳಗಿನಂತೆ ಪಾವತಿಸುವುದು.

| ಘಟಕವಾರು(ಗಾತ್ರವಾರು) | ಸಹಾಯಧನ (ರೂ.ಗಳಲ್ಲಿ) |
|---|---|
| 1 ಘ.ಮೀ | 1500 |
| 2 ಘ.ಮೀ ರಿಂದ ಮೇಲ್ಪಟ್ಟು | 3500 |

ತಮ್ಮ ವಿಶ್ವಾಸಿ,

(ಪಿ.ಎ.ಮೇಘಣ್ಣವರ)
ನಿರ್ದೇಶಕರು(ಗ್ರಾಮೂಸೌ) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ 2009-10ನೇ ಸಾಲಿನ , 01ನೇ ನವೆಂಬರ್ 2009 ರಿಂದ ಜಾರಿಗೆ ಬರುವಂತೆ ಕೇಂದ್ರ ಸಹಾಯಧನ ಪರಿಷ್ಕರಣೆ ಕುರಿತು

ಉಲ್ಲೇಖ ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 5-5/2009BE dinAMk 27.11.2009

ಪ್ರಸ್ತಾವನೆ :

ಉಲ್ಲೇಖಿತ ಪತ್ರದಲ್ಲಿ ಕೇಂದ್ರ ಸರ್ಕಾರವು 11ನೇ ಪಂಚವಾರ್ಷಿಕ ಯೋಜನೆಯ ಇನ್ನುಳಿದ ಅವಧಿಗೆ ಕೇಂದ್ರ ಪುರಸ್ಕೃತ ಕಾರ್ಯಕ್ರಮವಾದ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಡಿ ಗಾತ್ರವಾರು ನಿರ್ಮಿಸಲಾಗಯುವ ಅನಿಲ ಸ್ಥಾವರಗಳಿಗೆ ಸಹಾಯಧನವನ್ನು 01ನೇ ನವೆಂಬರ್ 2009 ಜಾರಿಗೆ ಬರುವಂತೆ, ವರ್ಗಾವಾರು ಹೊರತು ಪಡಿಸಿ, ಪರಿಷ್ಕರಿಸಲಾಗಿರುತ್ತದೆ. ಇದರನ್ವಯ ಕೇಂದ್ರ ಸರ್ಕಾರವು ಪರಿಷ್ಕರಿಸಲಾದ ಕೇಂದ್ರ ಸಹಾಯಧನವನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳಲ್ಲಿ 01ನೇ ನವೆಂಬರ್ 2009 ರಿಂದ ಜಾರಿಗೊಳಿಸಿ, ವರ್ಗಾವಾರು ಹೊರತುಪಡಿಸಿ, ಅನುಷ್ಠಾನಗೊಳಿಸಲು ಹಾಗೂ ಹಾಲಿ ಇದ್ದಂತಹ ರಾಜ್ಯ ಸಹಾಯಧನವನ್ನು ಸಹ ಮುಂದುವರಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ ; ಗ್ರಾಅಪ 22 ಜೈಅಯೋ 2009, ಬೆಂಗಳೂರು, ದಿನಾಂಕ 06.02.2010.**

ಪ್ರಸ್ತಾವನೆಯಲ್ಲಿ ವಿವರಿಸಿಲಾದಂತೆ, ಕೇಂದ್ರ ಸರ್ಕಾರದ ಉಲ್ಲೇಖಿತ ಪತ್ರದನ್ವಯ 2009-10ನೇ ಸಾಲಿನಲ್ಲಿ , 1ನೇ ನವೆಂಬರ್ 2009 ರಿಂದ ಜಾರಿಗೆ ಬರುವಂತೆ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮದಡಿ ಈ ಕೆಳಗಿನಂತೆ ಕೇಂದ್ರ ಸಹಾಯಧನವನ್ನು ಪರಿಷ್ಕರಿಸಿ, ವರ್ಗಾವಾರು ಹೊರತುಪಡಿಸಿ, ಅನುಷ್ಠಾನಗೊಳಿಸಲು ಹಾಗೂ ಹಾಲಿ ಇದ್ದಂತಹ ರಾಜ್ಯ ಸಹಾಯಧನವನ್ನು ಸಹ ಮುಂದುವರಿಸಿ ಆದೇಶಿಸಿದೆ.

**01ನೇ ನವೆಂಬರ್ 2009 ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲಾದ ಕೇಂದ್ರ ಸಹಾಯಧನ ಹಾಗೂ ತರಬೇತಿಯ ವಿವರಗಳು**

(ರೂ.ಗಳಲ್ಲಿ)

| ಕುಟುಂಬ ಗಾತ್ರದ ಜೈವಾನಿಲ ಸ್ಥಾವರ | ಕೇಂದ್ರ ಸಹಾಯಧನ | ಟರ್ನ ಕೀ ಫೀ | ಶೌಚಾಲಯ ಸಂಪರ್ಕಿತ ಅನಿಲ ಸ್ಥಾವರಗಳು * |
|---|---|---|---|
| 1 ಘ.ಮೀ | 4000 | 1500 | 1000 |
| 2ರಿಂದ 4 ಘ.ಮೀ | 8000 | 1500 | 1000 |

* ಕೇಂದ್ರ ಸಹಾಯಧನದಡಿ ಪಾವತಿಸಲಾಗುವ ಟರ್ನ ಕೀ ಫೀ ಯನ್ನು ಟರ್ನ ಕೀ ಏಜನ್ಸಿ / ವರ್ಕರ್ಸ್‌ಗಳಿಗೆ ಪಾವತಿಸುವಾಗ ಸ್ಥಾವರ ನಿರ್ವಹಣೆಯಲ್ಲಿ 5 ವರ್ಷಗಳ ಷರತ್ತು ಮತ್ತು ನಿಬಂಧನೆಗೊಳಪಟ್ಟು, ಮೊದಲ ವರ್ಷದಲ್ಲಿ ರೂ.700/- ನಂತರ ಪ್ರತಿ ವರ್ಷ ರೂ.200/- ರಂತೆ 4 ವರ್ಷಗಳಿಗೆ ರೂ.800/- ಗಳನ್ನು ಪಾವತಿಸುವುದು.

ತರಬೇತಿ:

(ರೂ.ಗಳಲ್ಲಿ)

| | |
|---|---|
| ಉಪಯೋಗದಾರರ ತರಬೇತಿ | 2000 |
| Staff ತರಭೇತಿ | 8000 |
| ರಿಪ್ರೆಷರ್/CCM ತರಬೇತಿ | 35000 |
| ಟರ್ನ ಕೀ ಅಪರೇಟರ್ ಮತ್ತು ಆಡಳಿತಾತ್ಮಕ ತರಬೇತಿ | 67500 |

**1ನೇ ನವೆಂಬರ್ 2009 ರ ನಂತರ ನಿರ್ಮಾಣಗೊಂಡು ಕಾರ್ಯಾರಂಭ ಮಾಡುತ್ತಿರುವ ಜೈವಾನಿಲ ಸ್ಥಾವರಗಳಿಗೆ, ಕೇಂದ್ರ ಪಾಲಿನಡಿ ಸಹಾಯಧನ, ಟರ್ನ ಕೀ ಫೀ, ಶೌಚಾಲಯ ಸಂಪರ್ಕಿತ ಅನಿಲ ಸ್ಥಾವರಗಳಿಗೆ ಪ್ರೋತ್ಸಾಹಧನ, ತರಬೇತಿ ಕಾರ್ಯಕ್ರಮಗಳಿಗೆ ಪರಿಷ್ಕರಿಸಿದ ದರದಲ್ಲೇ ನೀಡುವುದು . ಫೆಬ್ರವರಿ 2010ರ ಅಂತ್ಯದೊಳಗೆ ನಿಗದಿಪಡಿಸಲಾದ ಗುರಿಯನ್ನು ಪೂರ್ಣಪ್ರಮಾಣದಲ್ಲಿ ಸಾಧಿಸುವುದು.**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಪಿ.ಎ.ಮೇಘಣ್ಣವರ)**
ನಿರ್ದೇಶಕರು(ಗ್ರಾಮೂಸೌ)ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
3. ಎಲ್ಲಾ ಜಿಲ್ಲಾ ಪಂಚಾಯತ್‌ನ ಉಪಕಾರ್ಯದರ್ಶಿ(ಅಭಿವೃದ್ಧಿ) /ಮುಖ್ಯ ಲೆಕ್ಕಾಧಿಕಾರಿಗಳು, ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4. ಎಲ್ಲಾ ಜಿಲ್ಲೆಯ ಖಜಾನಾಧಿಕಾರಿಗಳು, ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ
5. ಖಜಾನೆಗಳ ಉಪ ನಿರ್ದೇಶಕರು, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು.
6. ನೆಟ್‌ವರ್ಕ ಮ್ಯಾನೇಜ್‌ಮೆಂಟ್ ಸೆಂಟರ್ ನಂ:49 ಸೆಕೆಂಡ್ ಬ್ಲಾಕ್, ಸೆಕೆಂಡ್ ಪ್ಲೋರ್, ಖನಿಜ ಭವನ, ಸೌತ್ ಎಂಟ್ರೆನ್ಸ್ , ರೇಸ್ ಕೋರ್ಸ ರಸ್ತೆ, ಬೆಂಗಳೂರು.
7. ಸರ್ಕಾರದ ಪ್ರಧಾನಕಾರ್ಯದರ್ಶಿಗಳು/ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
8. ನಿರ್ದೇಶಕರು(ಗ್ರಾಮೂಸೌ) ರವರ ಆಪ್ತ ಸಹಾಯಕರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ
9. ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿ